ಈ) ಶಿವಮೊಗ್ಗ ತಾಲ್ಲೂಕಿನಲ್ಲಿ 2002-2003ನೇ ಸಾಲಿನಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಈ ಕೆಳಕಾಣಿಸಿರುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

ರಾಜ್ಯವಲಯದಲ್ಲಿ:

1. ಜೌಳು : ಜೌಗು ಪ್ರದೇಶಗಳಲ್ಲಿ ಒಂದು ಎಕರೆ ಜಲ ವಿಸ್ತಾರದ ಮೀನು ಕೃಷಿ ಕೊಳಗಳ ನಿರ್ಮಾಣಕ್ಕೆ ಸಹಾಯಧನ ನೀಡುವುದು.
2. ಮೀನುಗಾರರಿಗೆ ಮೀನು ಮಾರಾಟಕ್ಕಾಗಿ ಸಹಾಯ ಧನ ನೀಡುವುದು.

ಜಿಲ್ಲಾ ವಲಯದಲ್ಲಿ :

1. ಗಾಜನೂರು ಮೀನುಮರಿ ಉತ್ಪಾದನಾ ಕೇಂದ್ರದಲ್ಲಿ ನೀರು ಸರಬರಾಜು, ಉಪಕರಣ, ವಿದ್ಯುಚ್ಛಕ್ತಿ ಹಾಗೂ ಹ್ಯಾಚರಿ ಇತ್ಯಾದಿ ನಿರ್ಮಾಣ ಹಾಗೂ ದುರಸ್ತಿ.
2. 30 ಲಕ್ಷ ಮೀನುಮರಿ ಉತ್ಪಾದನೆ ಹಾಗೂ 6.00 ಲಕ್ಷ ಮೀನುಮರಿಗಳ ಬಿತ್ತನೆ.
3. ಮೀನುಗಾರಿಕೆ ಸಾಮಗ್ರಿಗಳಿಗಾಗಿ ಸಹಾಯಧನ.
4. 0.65 ಲಕ್ಷ ಹುಲ್ಲುಗೆಂದೆ ಮೀನುಮರಿಗಳ ಸರಬರಾಜು.
5. ಬಣ್ಣದ ಮೀನುಗಳ ಅಕ್ವೇರಿಯಂ ಖರೀದಿ ಪ್ರದರ್ಶನ ಇತ್ಯಾದಿ.

ಕರಾವಳಿ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವುದು

1302(1740) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂತರ್ಜಲ ಮಟ್ಟವನ್ನು ಎತ್ತರಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಆ) ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ದಿನದಿಂದ ದಿನಕ್ಕೆ ಕೆಳಕ್ಕೆ ಹೋಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ತೆಗೆದುಕೊಂಡ ಕ್ರಮ ಯೋಜನೆಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ) ರಾಜ್ಯದ ಕ್ಲಿಷ್ಟಕರ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ಜಲ ಮಟ್ಟವನ್ನು ವೃದ್ಧಿಪಡಿಸಲು ಅಂತರ್ಜಲ ಕೃತಕ ಮರುಪೂರ್ಯೆಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಇಲಾಖೆ ಹಮ್ಮಿಕೊಂಡಿದೆ.

ಆ) ಕರಾವಳಿ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಇಳಿಮುಖವಾಗಿರುವುದಿಲ್ಲ.

ಇ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಒಟ್ಟು 3 ತಡೆಗೋಡೆಗಳನ್ನು ನಿರ್ಮಾಣ ಮಾಡಿದೆ. ಇದಲ್ಲದೆ ಕರಾವಳಿ ಜಿಲ್ಲೆಗಳಲ್ಲಿ ಕಿಂಡಿ ಅಣೆಕಟ್ಟುಗಳ ಮುಖಾಂತರ ಅಂತರ್ಜಲ ವೃದ್ಧಿಗೊಳಿಸುವ ಪ್ರಸ್ತಾವನೆ : ಯೋಜನೆ ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)ಯ ಮತಿಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮವಿರುತ್ತದೆ.

ರಾಜ್ಯದಲ್ಲಿ ಇರುವ ಜಾನುವಾರು ಸಂಖ್ಯೆಗೆ ಅನುಗುಣವಾಗಿ ಪಶು ಆಸ್ಪತ್ರೆ ಸೌಲಭ್ಯ

1304(1518) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ಜಾನುವಾರು ಸಂಖ್ಯೆಗೆ ಅನುಗುಣವಾಗಿ ಪಶು ಸೇವಾ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೇರೆ ರಾಜ್ಯಗಳು ಮತ್ತು ಅಖಿಲ ಭಾರತದಲ್ಲಿರುವ ರೀತಿಯಲ್ಲಿ ಪಶು ಸಂಗೋಪನೆ ಮತ್ತು ಪಶು ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಇ) ಈ ಇಲಾಖೆಯಲ್ಲಿ ಔಷಧಿ ಕೊಳ್ಳಲು ಅಗತ್ಯ ಹಣಕಾಸು ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಗತ್ಯ ಔಷಧಿಗಳ ಖರೀದಿಗೆ ಸಾಕಾಗುವಷ್ಟು ಹಣಕಾಸು ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಉ) ಗ್ರಾಮಾಂತರ ಪ್ರದೇಶದಲ್ಲಿ ಅಗತ್ಯವಿರುವಷ್ಟು ಸಂಖ್ಯೆ ಪಶು ಆಸ್ಪತ್ರೆ ಸೌಲಭ್ಯ ಕಲ್ಪಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ ಸಚಿವರು):

ಅ) ಇಲ್ಲ

ಆ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪಶು ಸಂಸ್ಥೆಗಳನ್ನು ಹಂತ ಹಂತವಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ

ಈ) ಪ್ರತಿ ವರ್ಷವೂ ಹೆಚ್ಚಿನ ಹಣಕಾಸನ್ನು ಹಂಚಿಕೆ ಮಾಡಲಾಗುತ್ತಿದೆ. ಸರ್ಕಾರಿ ಉದ್ಯಮಗಳಿಂದ ಅಗತ್ಯ ಔಷಧಿಗಳನ್ನು ಖರೀದಿಸಲಾಗುತ್ತಿದೆ.

ಉ) ಜಾನುವಾರು ಸಂಖ್ಯೆಗೆ ಅನುಗುಣವಾಗಿ ಸಾಕಷ್ಟು ಮಟ್ಟಿಗೆ ಪಶುವೈದ್ಯ ಸಂಸ್ಥೆಗಳನ್ನು ಒದಗಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಗಣಿಗಾರಿಕೆ

1305(1634) ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಗಣಿಗಳೆಷ್ಟು?

ಆ) 2001-02ನೇ ಸಾಲಿಗೆ ಈ ಗಣಿಗಳಿಂದ ತೆಗೆಯಲಾದ ಗಣಿಯ ಉತ್ಪನ್ನಗಳ ಪ್ರಮಾಣ ಎಷ್ಟು; ಮತ್ತು ಈ ಸಂಬಂಧ ಸ್ವೀಕರಿಸಲಾದ ತೆರಿಗೆ ಎಷ್ಟು?

ಇ) ಈ ಸಾಲಿನಲ್ಲಿ ತೆರಿಗೆ ಪಾವತಿಗೆ ನ್ಯಾಯಾಲಯದ ತಡೆಯಾಜ್ಞೆ ಪಡೆದಿರುವ ಪ್ರಕರಣಗಳು ಎಷ್ಟು ಮತ್ತು ಅವು ಯಾವುವು?

ಈ) ಈ ರೀತಿ ತಡೆಯಾಜ್ಞೆ ತಂದಿರುವವರು ಯಾರು? ಮತ್ತು ಪ್ರತಿ ಪ್ರಕರಣದಲ್ಲಿರುವ ಬಾಕಿ ಎಷ್ಟು?

ಉ) ತಡೆಯಾಜ್ಞೆ ತೆರವಿಗೆ ಮತ್ತು ಬಾಕಿ ವಸೂಲಾತಿಗೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ) ಮೈಸೂರು ಜಿಲ್ಲೆ:

ಜಿಲ್ಲೆಯಲ್ಲಿನ ಒಟ್ಟು ಗಣಿಗಳ ಸಂಖ್ಯೆ		:	241
ಗಣಿ ಗುತ್ತಿಗೆ	-	25	
ಕಲ್ಲುಗಣಿ ಗುತ್ತಿಗೆ	-	216	
ಒಟ್ಟು	-	241	